

ಮುಸಲಿ ಇದೆಯಲ್ಲ... ಅವುಳ ಬಾಯಿ, ಮುಕ್ಕು, ಕಣುಗಳಾಗೆ ಒಂದೀಟು, ಅಂಗೇ ಬಾಡಿ ಉದ್ಕೂ ಒಂದೀಟು ಆಕು. ನೆಮ್ಮದುಕೆ ನಿದ್ದೆ ಮಾಡ್ಲಿ' ಎಂದು ನುಡಿದು ಆಚೆ ನಡೆದುಬಿಟ್ಟ. ರಂಗಜ್ಜಿ ಮೊಮ್ಮೊಗನ ಕಡೆಗೆ ನೋಡಿದಳು. ಕಣ್ಣು ಮಂಜಾಗಿತ್ತು. ಅಸ್ಪಷ್ಟವಾಗಿ ಕಾಣಿಸಿದ. ಆ ಅಸ್ಪಷ್ಟ ಚಿತ್ರ ಅವನ ಅಪ್ಪನಂತೆಯೂ ತಾತನಂತೆಯೂ ಕಂಡಿತು. ಮತ್ತೆ ಕಣ್ಣು ಮುಚ್ಚಿಕೊಂಡು ಹಣೆಯ ಮೇಲೆ ಕೈ ಇಟ್ಟುಕೊಂಡಳು. ಕುಸುಮ ಹಳೇ ಪುಸ್ತಕದ ರಟ್ಟನ್ನು ಹಿಡಿದುಕೊಂಡು ತನ್ನ ಮುಖದ ಮೇಲೆ ಬೀಸುತ್ತಾ ನೊಣಗಳನ್ನು ಓಡಿಸುತ್ತಿರುವುದು ಹಿತವೆನಿಸಿತು. ಬೆಳಗ್ಗೆ ಬಿಸಿಲೇರಿ ಸೆಕೆ ಅನಿಸಿದಾಗ ರಂಗಜ್ಜಿಗೆ ಆಚೆ ಹೋಗಬೇಕನಿಸಿತ್ತು. ಆಗ 'ಲೇ ಬಾಸ್ಕರ ಯಾಕೋ ವುಡುಕಾಗ್ತಿದೆ. ವಸಿ ಆಚೆ ವರಂಡಾನಾಗೆ ಸಾಗಿಸ್ಲ, ಗಾಳೀನಾರ ಆಡ್ಲಿ. ಲೇ... ಬಾಸ್ಕರ' ಎಂದು ಕೂಗಿದ್ದಳು. ಭಾಸ್ಕರ ಟೀ ಕುಡಿದು ಸುಮ್ಮನೆ ಕುಳಿತೇ ಇದ್ದ. ಸುಶೀಲ ಮತ್ತು ಕುಸುಮ ದಿವಾನವನ್ನು ರಂಗಜ್ಜಿಯ ಸಮೇತ ಕಷ್ಟಪಟ್ಟು ಎತ್ತಿಕೊಂಡು ಪಡಸಾಲೆಗೆ ಸಾಗಿಸಿದ್ದರು.

ಅವಳ ಚಲನೆ ನಿಂತು ಬಹಳ ದಿನಗಳೇ ಆಗಿತ್ತು. ಮೈಯಲ್ಲಿ ಒಂದಿಷ್ಟೂ ಕಸುವಿಲ್ಲದೆ ಹಾಸಿಗೆ ಹಿಡಿದಿದ್ದಳು. ಸಾಕು ಮಗಳು ಸುಶೀಲ ಈ ಮೊದಲು ಒಂದೆರಡು ಕಡೆ ಕರೆದುಕೊಂಡು ಹೋಗಿ ತೋರಿಸಿದ್ದಳು. ಎಲ್ಲಾ ಪರೀಕ್ಷೆ ಮಾಡಿದ್ದ ವೈದ್ಯರು 'ಮೂಳೆ ಕ್ಯಾನ್ಸರ್... ಬಹಳ ದಿನ ಬದುಕುವುದಿಲ್ಲ. ಹೆಚ್ಚೆಂದರೆ ಮೂರುನಾಲ್ಕು ತಿಂಗಳಷ್ಟೆ' ಎಂದು ಹೇಳಿದ್ದರು. ಸುಶೀಲಳಿಗೆ ಮತ್ತೆಲ್ಲಾದರೂ ದೊಡ್ಡ ಆಸ್ಪತ್ರೇಲಿ ತೋರಿಸೋಣವೆಂದನಿಸಿತ್ತು. ಆದರೆ ಗಂಡ ಕೃಷ್ಣಾರೆಡ್ಡಿ 'ಸುಮ್ಕೆ ದುಡ್ಡು ವೇಸ್ಟು. ಉಳಿಯಲ್ಲ ಅಂದ್ಮೇಕೆ ಮತ್ತೆ ತೋರ್ಸೋದೇನು. ಬುದ್ದಿ ಇಲ್ವೆ ನಿಂಕೆ. ಕಾಸೇನು ಅವುಳಾಕಿರೊ ಮರ್ದಿಂದ ಉದುರುತ್ತಾ...